ವಿಧಾನ ಸಭಾ ಸದಸ್ಯರಾದ ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಿಬಿದ್ರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1100 ಕ್ಕೆ ಉತ್ತರ.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಿಂದುಳಿದ ವರ್ಗಗಳ ಸಮುದಾಯ ಭವನ ನಿರ್ಮಾಣ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀಡಿರುವ ಅನುದಾನದ ಮೊತ್ತ ಮತ್ತು ಬೇಡಿಕೆಗಳನ್ವಯ ಯೋಜನಾನುಷ್ಠಾನದ ಗುರಿ ಮತ್ತು ಸಾಧನೆಗಳೇನು ? (ವಿವರ ನೀಡುವುದು) | ಹಿಂದುಳಿದ ವರ್ಗಗಳ ಸಮುದಾಯ ಭವನ ನಿರ್ಮಾಣ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀಡಿರುವ ಅನುದಾನ ಮೊತ್ತ ಹಾಗೂ ಬೇಡಿಕೆಯನ್ವಯ ಮಂಜೂರು ಮಾಡಲಾಗಿರುವ ಅನುದಾನ ವಿವರವನ್ನು ಅನುಬಂಧ-1, ಅನುಬಂಧ-2, ಅನುಬಂಧ-3 ರಲ್ಲಿ ನೀಡಿದೆ. |
| ಆ) | ಈ ಉಪಯುಕ್ತ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ನಿರ್ಮಿಸಲಾಗುವ ಸಮುದಾಯ ಭವನಗಳಿಗೆ ನಿಗಧಿಪಡಿಸಿರುವ ಮೊತ್ತವನ್ನು ಹೆಚ್ಚಿಸಿ ಅನುಕೂಲ ಮಾಡಿಕೊಡುವ ಕುರಿತು ಸರ್ಕಾರ ಕ್ರಮಜರುಗಿಸುವುದೇ ? | ಈ ಉಪಯುಕ್ತ ಯೋಜನೆಯಡಿ ಅನುದಾನ ಮಂಜೂರಾತಿ ಮಿತಿಯನ್ನು ಸಡಿಲಗೊಳಿಸಿ ವಿಶೇಷ ಪ್ರಕರಣವೆಂದು ಹೆಚ್ಚುವರಿಯಾಗಿ ಸರ್ಕಾರದ ಹಂತದಲ್ಲಿ ಮಂಜೂರು ಮಾಡುಲು ಅವಕಾಶ ಕಲ್ಪಿಸಲಾಗಿದೆ. (ಮಾರ್ಗಸೂಚಿಗಳ ತಿದ್ದುಪಡಿ ಆದೇಶ ಪ್ರತಿಯನ್ನು ನೀಡಿದೆ). |
| ಇ) | ಹಿಂದುಳಿದ ವರ್ಗಗಳ ಸಂಘ/ಸಂಸ್ಥೆಗಳು ಸಲ್ಲಿಸಿದ ಮನವಿಯನ್ನು ಪುರಸ್ಕರಿಸಿ, ಅನುದಾನ ಬಿಡುಗಡೆ ಬಾಕಿ ಪ್ರಕರಣಗಳಿಗೆ ಸಕಾಲಿಕವಾಗಿ ಬಿಡುಗಡೆಗೊಳಿಸುವ ಕುರಿತಾದ ಸರ್ಕಾರದ ಪ್ರೋತ್ಸಾಹಕ ಕ್ರಮಗಳೇನು ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹಿಂದುಳಿದ ಸಮುದಾಯಗಳಿಗೆ ಯೋಜನೆ ಸೌಲಭ್ಯ ನೀಡಲಾಗಿದೆ. | ಮಾರ್ಗಸೂಚಿಗಳಾನುಸಾರ 3 ಕಂತುಗಳಲ್ಲಿ ಅನುದಾನ ಬಿಡುಗಡೆ ಮಾಡುತ್ತಿದ್ದು, ಸಂಘ-ಸಂಸ್ಥೆಗಳು ಸಲ್ಲಿಸುವ ದಾಖಲಾತಿ ಹಾಗೂ ಪ್ರಗತಿಯನ್ನಾಧರಿಸಿ ಲಭ್ಯವಿರುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನಾಧರಿಸಿ ಬಿಡುಗಡೆ ಮಾಡಲಾಗುತ್ತದೆ.<br>ದಕ್ಷಿಣ ಕನ್ನಡ ಜಿಲ್ಲೆಗೆ ಕಳೆದ ಎರಡು ವರ್ಷಗಳಲ್ಲಿ ಒಟ್ಟು 43 ಸಂಘ-ಸಂಸ್ಥೆಗಳಿಗೆ ಅನುದಾನ ಮಂಜೂರು ಮಾಡಲಾಗಿದ್ದು, ವಿವರವನ್ನು ಅನುಬಂಧ-4 ರಲ್ಲಿ ನೀಡಿದೆ. |

ಆಯುಕ್ತರ ಪರವಾಗಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

.docx